**ಸಾಕ್ಷಿಯನ್ನು ದಿಃ17.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಪಿ - 13 ನ್ನು ನನ್ನ ಪತಿ ಬದುಕಿದ್ದಾಗಲೇ ಬರವಣಿಗೆ ಆಗಿರುತ್ತದೆ. ಸದರಿ ಪತ್ರಕ್ಕೆ ನನ್ನ ಪತಿ ಸಹಿ ಹಾಕಿಲ್ಲ.

2. ದಿಃ 08.11.2010 ರಂದು ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದರು.

3. ದಿಃ 03.02.2011 ರಂದು ನಿಪಿ - 13 ನ್ನು ಬರೆದುಕೊಟ್ಟಿರುತ್ತಾರೆ.

4. ನಿಪಿ-13 ನ್ನು ಬರೆಯಲು ಪತ್ರವನ್ನು ಮಹಾಲಿಂಗಪ್ಪನವರು ತಂದಿರುತ್ತಾರೆ. ದಿಃ 03.02.2011 ರಂದು ಅವರು ತಂದಿರುತ್ತಾರೆ.

5. ನಿಪಿ - 13 ನ್ನು ಯಾರ ಹೆಸರಿನಲ್ಲಿ ತಂದಿದ್ದಾರೆ ಎಂದರೆ, ನನಗೆ ಗೊತ್ತಿಲ್ಲ. ನಿಪಿ - 13 ರ ಪತ್ರ 20 ರೂಪಾಯಿಯ ಪೇಪರ್.

6. ನಿಪಿ - 13 ರ ಮೇಲೆ ಯಾವ ಉದ್ದೇಶಕ್ಕೆ ಎಂದು ಬರೆಸಿದ್ದಾರಾ ಎಂದರೆ, ಹಣ ಸಂದಾಯ ರಶೀದಿ ಬರೆಸಲು ತಂದಿದ್ದಾರೆ.

7. ನನ್ನ ಪತಿ ವ್ಯವಸಾಯ ಮಾಡುತ್ತಿದ್ದರು. ಅವರಿಗೆ ಕನ್ನಡ ಓದಲು ಬರೆಯಲು ಚೆನ್ನಾಗಿ ಬರುತ್ತಿತ್ತು ಎಂದರೆ ಸರಿ. ನಿಮ್ಮ ಪತಿಗೆ ಇಂಗ್ಲೀಷ್ ಸಹ ಓದಲು ಬರೆಯಲು ಬರುತ್ತಿತ್ತು ಎಂದರೆ ಸರಿ.

8. ನಿಪಿ-13 ನ್ನು ದಿಃ27.01.2011 ರಲ್ಲಿ ಖರೀದಿಸಿದ ಪೇಪರ್ ಎಂದರೆ, ಅದನ್ನು ಮಹಾಲಿಂಗಪ್ಪನವರು ತಂದಿದ್ದರು ಎಂದು ನುಡಿಯುತ್ತಾರೆ.

9. ಸದರಿ ವ್ಯವಹಾರ ನಡೆಯುವಾಗ ನಾನು ಇದ್ದೆ. ಉಪ ನೊಂದಣಿ ಕಛೇರಿಯಲ್ಲಿ ವ್ಯವಹಾರ ನಡೆದಿರುತ್ತದೆ.

10. ನಿಪಿ- 13 ನೊಂದಣಿ ಆಗಿದೆಯಾ ಎಂದರೆ, ನನಗೆ ನೆನಪಿಲ್ಲ.

11. ನಿಪಿ - 13 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ.

12. ನಿಪಿ - 13 ನ್ನು ವಿಜಯೇಂದ್ರ ರವರು ಬರೆದಿರುತ್ತಾರೆ.

13. ನಿಪಿ - 13 ನ್ನು ನೊಂದಣಿ ಕಛೇರಿಯಲ್ಲಿ ತಯಾರಿಸಲಾಯಿತಾ ಎಂದರೆ, ವಿಜಯೇಂದ್ರ ರವರ ಕಛೇರಿಯಲ್ಲಿ ಬರೆದಿರುತ್ತಾರೆ.

14. ನಿಪಿ -13 ಕ್ಕೆ ಮಾಹಾಲಿಂಗಪ್ಪ ನವರು ನೊಂದಣಿ ಕಛೇರಿಯಲ್ಲಿ ಸಹಿ ಹಾಕಿದರಾ ಎಂದರೆ, ನನಗೆ ನೆನಪಿಲ್ಲ.

15. ನಿಪಿ - 13 ಜಗದೀಶ ಕುಮಾರ್ ವಕೀಲರು ಎಂಬುವವರ ಹೆಸರಿನಲ್ಲಿದೆ ಎಂದರೆ, ಮಾಹಾಲಿಂಗಪ್ಪನವರು ತಂದಿದ್ದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

16. ನಿಪಿ -13 ರಲ್ಲಿ ಪ್ರಮಾಣ ಪತ್ರಕ್ಕಾಗಿ ಎಂದು ಇದೆ ಎಂದರೆ ಸರಿಯಲ್ಲ.

17. ನಿಪಿ - 13 ನ್ನು ಮಹಾಲಿಂಗಪ್ಪನವರು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ.

18. ಕ್ರಯ ಕರಾರಿಗಿಂತ ಹಿಂದಿನ ಪೇಪರ್ ಆಗಿದ್ದು ಜಗದೀಶ ಕುಮರ್ ರವರ ಹೆಸರಿನಲ್ಲಿರುವುದರಿಂದ ಹಣ ಕೊಡುವುದಿಲ್ಲ ಎಂದು ನಿಮ್ಮ ಪತಿ ಹೇಳಿದ್ದರಾ ಎಂದರೆ, ನಂಬಿಕೆಯಿಂದ ಹಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

19. ನಿಪಿ -13 ರಡಿಯಲ್ಲಿ ಮಾಹಾಲಿಂಗಪ್ಪನವರು ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ.

20. ನೀವು ಬೇರೆಯವರ ಹೆಸರಿನಲ್ಲಿರುವ ಪೇಪರ್ ಮೇಲೆ ಮಾಹಾಲಿಂಗಪ್ಪ ನವರ ಸಹಿ ಫೋರ್ಜರಿ ಮಾಡಿ ಸಾಕ್ಷಿಗಳ ಸಹಿ ಮಾಡಿಸಿ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

21. 100 ರೂಪಾಯಿಗಿಂತ ಹೆಚ್ಚಿನ ವ್ಯವಹಾರ ನೊಂದಣಿ ಕಛೇರಿಯಲ್ಲಿ ಆಗಬೇಕು ಎಂದು ಕಾನೂನು ಇದೆ ಎಂದರೆ ನನಗೆ ಗೊತ್ತಿಲ್ಲ.

22. ಮಹಾಲಿಂಗಪ್ಪನವರಿಗೆ ನಿಮ್ಮ ಪತಿ ಎಷ್ಟು ರೂಪಾಯಿಯ ನೋಟುಗಳನ್ನು ನೀಡಿದರು ಎಂದರೆ, 500 ರೂಪಾಯಿಯ ನೋಟು ನೀಡಿದ್ದರು. ಹಣವನ್ನು ನೊಂದಣಿ ಕಛೇರಿಯಲ್ಲಿ ನೀಡಿರುತ್ತಾರೆ. ಸುರೇಶ, ಮಂಜುನಾಥ ಹಾಗೂ ಲಕ್ಷ್ಮೀನಾರಾಯಣ ಆ ಸಮಯದಲ್ಲಿ ಅಲ್ಲಿಯೇ ಇದ್ದರು.

23. ಅವರೂ ಸಹ ಮಹಾಲಿಂಗಪ್ಪನವರ ಜೊತೆ ನೊಂದಣಿ ಕಛೇರಿಯಲ್ಲಿ ಸಹಿ ಹಾಕಿದರಾ ಎಂದರೆ, ಅವರೂ ಹಾಕಿದ್ದಾರೆ ಎಂದು ನುಡಿಯುತ್ತಾರೆ.

24. ಮೊದಲ ಕರಾರು ಪತ್ರದಲ್ಲಿ ಸ್ವಾಧೀನ ರಹಿತ ಕ್ರಯ ಒಪ್ಪಂದ ಎಂದು ಇದ್ದು ನಿಪಿ - 13 ರಲ್ಲಿ ಸ್ವಾಧೀನ ಸಹಿತ ಎಂದು ಇದೆ ಎಂದರೆ, ಅದು ತಪ್ಪಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಮಹಾಲಿಂಗಪ್ಪನವರೇ ಮಾಡಿಸಿಕೊಂಡು ತಂದಿದ್ದರು ಎಂದು ನುಡಿಯುತ್ತಾರೆ.

25. ಮಹಾಲಿಂಗಪ್ಪನವರು ನಿಪಿ - 13 ನ್ನು ತಂದು ಕೊಟಿಲ್ಲ, ಅವರು ಯಾವುದೇ ಹಣ ಪಡೆದಿಲ್ಲ ಹಾಗೂ ಅದಕ್ಕೆ ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

26. ನಿಪಿ - 13 ರಲ್ಲಿ ಹಳೆಯ ದಿಃ 08.11.2020 ರ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ಎಂದು ನಮೂದು ಇದೆಯಾ ಎಂದರೆ, ಮಹಾಲಿಂಗಪ್ಪನವರು ತಂದು ಕೊಟ್ಟಿದ್ದರಿಂದ ನನಗೆ ಗೊತ್ತಿಲ್ಲ.

27. ನಿಮ್ಮ ಪತಿಯು ಪದವೀಧರರಾಗಿದ್ದು ಹಳೆಯ ಕರಾರು ಪತ್ರದ ಬಗ್ಗೆ ಹೇಳಿಲ್ಲದ ಕಾರಣ ಹಣ ಕೊಡುವುದಿಲ್ಲ ಎಂದು ಹೇಳಿದ್ದರಾ ಎಂದರೆ, ನಂಬಿಕೆ ಇಟ್ಟು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

28. ದಿಃ 08.11.2020 ರ ಕರಾರು ಪತ್ರ ಸಹ ಕಾನೂನಿನಡಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

29. ನಿಮ್ಮ ಪತಿಯಿಂದ ಮಹಾಲಿಂಗಪ್ಪನವರು 50 ಸಾವಿರ ಹಣ ಪಡೆದು ವಾಪಸ್ ಬಡ್ಡಿ ಸಮೇತ ನಿಮ್ಮ ಪತಿಗೆ ನೀಡಿದ್ದರೂ, ವಾಪಸ್ ಪತ್ರ ಬರೆದುಕೊಂಡುವಂತೆ ತಿಳಿಸಿದರೂ ನಿಮ್ಮ ಪತಿ ಬರೆದಿಲ್ಲ, ಅವರ ಮರಣಾನಂತರ ನೀವು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

30. ಮಹಾಲಿಂಗಪ್ಪನವರು ನಿಮ್ಮ ಪತಿಯ ಹೆಸರಿಗೆ ಯಾವುದೇ ಕರಾರು ಪತ್ರ ಹಾಗೂ ಹಣ ಸಂದ ರಶೀದಿಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

31. ಸಾಕ್ಷಿ ಸುರೇಶ ರವರು ದೊಡ್ಡ ಕಮರವಳ್ಳಿ ಗ್ರಾಮದವರು. ಬೇರೆ ಸಾಕ್ಷಿದಾರರು ಶಾನುಭೋಗನಹಳ್ಳಿ ಗ್ರಾಮದವರು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ